ಪ್ರತಿಮೆಯ ಒಳಗಿಂದ ಬರುತ್ತಾನೆ. ರಾಜಮಾತೆಯು ಒಳಗೊಂಡಂತೆ ಇಡೀ ದುರ್ಗದ ಪರಿವಾರವೇ ನೆರೆದಿರುತ್ತದೆ. 'ಭಗವಂತನ ಆದೇಶವಿಲ್ಲದೆ ಒಂದು ಹುಲ್ಲು ಕಡ್ಡಿಯೂ ಚಲಿಸಲಾರದು. ಎಲ್ಲಾ ದೈವೇಚ್ಛೆ' ಎನ್ನುತ್ತಾ ಪುರೋಹಿತರು ವಿವಾಹವನ್ನು ಸಂಪನ್ನಗೊಳಿಸುತ್ತಾರೆ.

ಹೆಣ್ಣು ಹೊರಡಿಸುವ ಸಮಯ. ಕೊನೆಗೂ ಶತ್ರು ಅಳಿಯನಾದನಲ್ಲ ಎಂದು ಒಂದು ಕಡೆ, ಕರುಳು ಕತ್ತರಿಸಿ ಕಂಡವರಿಗೆ ಕೊಡುವ ಅನುಭವ ಮತ್ತೊಂದು ಕಡೆ. ರಾಯ ದುಃಖ ತಡೆಯಲಾಗದೆ ಕುಸಿದು ಅಳತೊಡಗಿದಾಗ ಪುತ್ರಿ ಸಮಾಧಾನಗೊಳಿಸುವ ಪರಿ ಮನ ಕಲಕುತ್ತದೆ. ಅದರೊಂದಿಗೆ ಹಾಡುಗಾರ್ತಿಯರ ಗುಂಪು:

ಕಣ್ಣು ಒರೆಸಿಕೊಳ್ಳುವೆವು
ನಾವು ನಗುಮುಖದಿ ಸಾಗಿರಿ ನೀವು
ನಮ್ಮ ಮನೆಯ ದೀಪ
ನಿಮ್ಮ ಮನೆಯ ಬೆಳಗಲಿ
ಬಾಳಿ ಬದುಕಲಿ
ಬಾಳಿ ಬದುಕಲಿ
ಹೋಗಿ ಬನ್ನಿ...

ಎಂದು ಹಾಡಿದಾಗ ಕಣ್ಣೀರು ಬರದೇ ಇರುವುದೇ?

ಓಬವ್ವ ನಾಗತಿಗೆ ಬಯಸಿದ್ದು ದೊರೆಯಿತು. ಆದರೆ, ತಂದೆ–ತಾಯಿ, ತವರನ್ನು ತೊರೆಯುವ ಕಷ್ಟ ಹೇಳತೀರದು. 'ನೀನು ಪುಟ್ಟ ನಾಗತಿಯಾಗಿಯೇ ಇರಬೇಕಿತ್ತು, ಸದಾ ನನ್ನೊಡನೆ...' ಎಂದು ದೇವಮ್ಮ ಅತ್ತರೆ, 'ಅವ್ವ ನನ್ನವ್ವ' ಎಂದು ಪುರದ ಜನರು ಕೂಗಿಕೊಂಡರೆ, ಸಾರೋಟಿನ ಹಿಂದೆಯೇ ಬಟ್ಟೆಯ ಗಂಟು ಹಿಡಿದು ನಡೆದ ಹೊನ್ನವ್ವ, ಅರಮನೆಯ ಕಂಬಕ್ಕೆ ಹೊರಗಿ ಕೂತ ಆನೆಗುಂದಿ ರಾಯ... ನಿರಂತರವಾಗಿ ನಮ್ಮನ್ನು ಕಾಡುತ್ತಾರೆ.

ದುರ್ಗದ ಸೊಸೆ ಓಬವ್ವ ನಾಗತಿ ಮೊದಲಿಗೆ ರಾಜಮಾತೆ ದೊಡ್ಡ ಸಿದ್ಧಾಂಬಿಕೆಗೆ ಪ್ರೀತಿ ಪಾತ್ರಳಾಗುತ್ತಾಳೆ. ಅತ್ತೆ ಸೊಸೆಯ ಅನ್ಯೋನ್ಯತೆಗೆ ಇದೊಂದು ಕೈಗನ್ನಡಿ. ದುರ್ಗದ ಬೃಹನ್ಮಠದ ಆಶೀರ್ವಾದ ಲಭಿಸುತ್ತದೆ. ದುರ್ಗದ ಇತಿಹಾಸವನ್ನು ಸ್ವತಃ ರಾಜಮಾತೆ ಸೊಸೆಗೆ ತಿಳಿಸುತ್ತಾರೆ. ಹಿರೇಮದಕರಿ ನಾಯಕನಿಗೆ ಬಿಡುವೇ ಇಲ್ಲದಿದ್ದರೂ ಬಯಸಿ, ಪ್ರೀತಿಸಿ, ಪಡೆದ ಮನದನ್ನೆಯನ್ನು ಆನೆಯ ಮೇಲೆ ಕೂರಿಸಿ ಆನಂದದಿಂದ ವಿಹರಿಸುತ್ತಾನೆ.

ಬೆಳಗು ಮೊದಲೇ ಎಚ್ಚರವಾಗುತ್ತಿದ್ದ ನಾಗತಿ ಸ್ನಾನ, ಪೂಜೆ, ಗೋ ಪೂಜೆ, ಸೂರ್ಯ ನಮಸ್ಕಾರ, ನಾಯಕರ ದಿನಾಚರಣೆ, ರಾಜಮಾತೆಯ ಯೋಗಕ್ಷೇಮ, ಅರಮನೆಯ ಹಿರಿಯ ಕಿರಿಯರನ್ನು ವಿಚಾರಿಸುವುದು, ಪ್ರತಿಯೊಬ್ಬರ ಬಗ್ಗೆ ವೈಯಕ್ತಿಕ ಗಮನಹರಿಸುವುದು ನಿರಂತರವಾಗಿ ನಡೆಯುತ್ತಿತ್ತು. ತಾಯಿ ಮನೆಯಲ್ಲಿ ಗುರು ಸಾನ್ನಿಧ್ಯದಲ್ಲಿ ಕಲಿತದ್ದು ಗಂಡನ ಮನೆಯಲ್ಲಿ ಪಾಲನೆಯಾಗುತ್ತಿತ್ತು. ಹೀಗೆ ಸಾಗುತ್ತಿರಲು ಓಬವ್ವ ನಾಗತಿ ಗಂಡು ಮಗುವಿಗೆ ಜನ್ಮ ನೀಡುತ್ತಾರೆ. ಬಿಚ್ಚುಗತ್ತಿ ಭರಮಣ್ಣ ನಾಯಕರೇ ಮರುಜನ್ಮ ತಾಳಿದರೆಂದು ದುರ್ಗಕ್ಕೆ ದುರ್ಗವೇ ಸಂಭ್ರಮಿಸಿತು. ಮಗುವಿಗೆ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನೆಂದು ಹೆಸರಿಟ್ಟು, ಊರಿಗೆಲ್ಲ ಸಿಹಿಭೋಜನ ಬಡಿಸಿದರು.

ಅರಮನೆ, ಮಕ್ಕಳು, ಹೆಂಡತಿ ಎನ್ನುತ್ತಾ ರಾಜನಾದವನು ಆರಾಮಾಗಿ ಕುಳಿತುಕೊಳ್ಳುವ ಹಾಗಿರಲಿಲ್ಲ. ಪುತ್ರನನ್ನು ವೆಂಕಟಾಚಲೆಗೆ ಒಪ್ಪಿಸಿ ನಾಗತಿ, ತನ್ನ ಗಂಡನೊಡನೆ ಯುದ್ಧಕ್ಕೆ ಹೋಗುತ್ತಿದ್ದಳು. ಇಂದಿನ ಮಿತ್ರ ನಾಳೆಯ ಶತ್ರು ಆಗುತ್ತಿದ್ದನು. ಸಕಲ ಯುದ್ಧ ತರಬೇತಿಯನ್ನು ತನ್ನ ತಂದೆಯಿಂದಲೇ ಪಡೆದುಕೊಂಡಿದ್ದ ಓಬವ್ವ ನಾಗತಿಗೆ ಒಮ್ಮೆ ತಂದೆಯನ್ನೇ ಎದುರುಗೊಳ್ಳುವ ಪರಿಸ್ಥಿತಿ ಬಂದಿತು. ಅವರು ಅಳಿಯನ ಮೇಲೆ ಸಂಚು ನಡೆಸಿ ಶತ್ರು ಪಾಳೆಯವನ್ನು ಬೆಂಬಲಿಸುತ್ತ ಅವರ ರಕ್ಷಣೆಗೆ ನಿಂತಿದ್ದರು. ಶತ್ರು ಪಾಳೆಯದಲ್ಲಿ ತನ್ನ ತಂದೆಯನ್ನು ಕಂಡಾಗ ನಾಗತಿಗೆ ಏನನಿಸಿರಬಹುದು? ರಾಯ ಪುತ್ರಿಯನ್ನು ಕಂಡು ಭಾವುಕನಾದರೂ ರಣರಂಗದ ನಿಯಮ ಬದಲಾಗಲಿಲ್ಲ. ಆಗಲೂ ನಾಗತಿಯ ಆತ್ಮಸ್ಥೈರ್ಯ ಮೆಚ್ಚುವಂಥದ್ದು.

ಓಬವ್ವ ನಾಗತಿಯ ದಾಂಪತ್ಯ ಬಹಳ ಕಾಲ ಬಾಳಲಿಲ್ಲ. ಪತಿ ಮಡಿದಾಗ, ದಿಟ್ಟೆಯಾಗಿ ಪುತ್ರ ಕಸ್ತೂರಿ ರಂಗಪ್ಪನಾಯಕನಿಗೆ ರಾಜ್ಯಭಾರ ಹೊರೆಸುತ್ತಾಳೆ.ಗದ್ದುಗೆಗೆ ತಕ್ಕಂತೆ ತರಬೇತಿಗೊಳಿಸಿ